**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನಸಭೆ**
**ಎಂಟನೇ ಅಧಿವೇಶನ**

# ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2015

**(2015ರ ವಿಧಾನಸಭೆಯ ವಿಧೇಯಕ ಸಂಖ್ಯೆ – 33)**

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ನ್ನು (1962ರ ಕರ್ನಾಟಕ ಅಧಿನಿಯಮ 10) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 79ಎ ಪ್ರಕರಣದ ತಿದ್ದುಪಡಿ.–** ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 10) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 79ಎ ಪ್ರಕರಣದ,–

(i) (1)ನೇ ಉಪಪ್ರಕರಣದಲ್ಲಿ,–

(ಎ) "ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 1995ರ" ಎಂಬ ಪದಗಳು ಮತ್ತು ಅಂಕಿಗಳಿಗೆ "ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 2015ರ" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) "ಎರಡು ಲಕ್ಷ" ಎಂಬ ಪದಗಳಿಗೆ "ಇಪ್ಪತ್ತೈದು ಲಕ್ಷ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (2)ನೇ ಉಪಪ್ರಕರಣದಲ್ಲಿ, "ಎರಡು ಲಕ್ಷ" ಎಂಬ ಪದಗಳು ಬರುವ ಕಡೆಗಳಲ್ಲೆಲ್ಲ "ಇಪ್ಪತ್ತೈದು ಲಕ್ಷ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. 80ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 80ನೇ ಪ್ರಕರಣದಲ್ಲಿನ ಪರಂತುಕದಲ್ಲಿ "ಅಸಿಸ್ಟೆಂಟ್ ಕಮೀಷನರು" ಮತ್ತು "ಅಸಿಸ್ಟೆಂಟ್ ಕಮೀಷನರ್‌ಗಿಂತ" ಎಂಬ ಪದಗಳಿಗೆ, ಕ್ರಮವಾಗಿ "ಜಿಲ್ಲಾಧಿಕಾರಿ" ಮತ್ತು "ಜಿಲ್ಲಾಧಿಕಾರಿಗಿಂತ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**4. 109ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 109ನೇ ಪ್ರಕರಣದ,–

(1) (1)ನೇ ಉಪಪ್ರಕರಣದಲ್ಲಿ,–

(ಎ) (i)ನೇ ಖಂಡದಲ್ಲಿ "ಇಪ್ಪತ್ತು ಯುನಿಟಗಳಿಗಿಂತ" ಎಂಬ ಪದಗಳಿಗೆ "ನಲವತ್ತು ಯುನಿಟಗಳಿಗಿಂತ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) (ii)ನೇ ಖಂಡದಲ್ಲಿ "ನಾಲ್ಕು ಯುನಿಟಗಳಿಗಿಂತ" ಎಂಬ ಪದಗಳಿಗೆ "ಎಂಟು ಯುನಿಟಗಳಿಗಿಂತ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಸಿ) (iii)ನೇ ಖಂಡದಲ್ಲಿ "ಒಂದು ಯುನಿಟಗಿಂತ" ಎಂಬ ಪದಗಳಿಗೆ "ಎರಡು ಯುನಿಟಗಳಿಗಿಂತ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಡಿ) (iv)ನೇ ಖಂಡದಲ್ಲಿ "ಹತ್ತು ಯುನಿಟಗಳಿಗಿಂತ" ಎಂಬ ಪದಗಳಿಗೆ "ಇಪ್ಪತ್ತು ಯುನಿಟಗಳಿಗಿಂತ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಇ) (v)ನೇ ಖಂಡದಲ್ಲಿ "ಇಪ್ಪತ್ತು ಯುನಿಟಗಳಿಗಿಂತ" ಎಂಬ ಪದಗಳಿಗೆ "ನಲವತ್ತು ಯುನಿಟಗಳಿಗಿಂತ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಎಫ್) ಪರಂತುಕದಲ್ಲಿ,–

(i) (i)ನೇ ಖಂಡದಲ್ಲಿ "ಹತ್ತು ಯುನಿಟಗಳಿಗಿಂತ" ಎಂಬ ಪದಗಳಿಗೆ "ಇಪ್ಪತ್ತು ಯುನಿಟಗಳಿಗಿಂತ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (ii)ನೇ ಖಂಡದಲ್ಲಿ "ಎರಡು ಯುನಿಟಗಳಿಗಿಂತ" ಎಂಬ ಪದಗಳಿಗೆ "ನಾಲ್ಕು ಯುನಿಟಗಳಿಗಿಂತ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iii) (iii)ನೇ ಖಂಡದಲ್ಲಿ "ನಾಲ್ಕನೇ ಒಂದು ಯುನಿಟಗಳಿಗಿಂತ" ಎಂಬ ಪದಗಳಿಗೆ "ಅರ್ಧ ಯುನಿಟಗಿಂತ (2.22 ಎಕರೆ)" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

(iv) (iv)ನೇ ಖಂಡದಲ್ಲಿ "ಹತ್ತು ಯುನಿಟಗಳಿಗಿಂತ" ಎಂಬ ಪದಗಳಿಗೆ "ಇಪ್ಪತ್ತು ಯುನಿಟಗಳಿಗಿಂತ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(v) (v)ನೇ ಖಂಡದಲ್ಲಿ "ಹತ್ತು ಯುನಿಟಗಳಿಗಿಂತ" ಎಂಬ ಪದಗಳಿಗೆ "ಇಪ್ಪತ್ತು ಯುನಿಟಗಳಿಗಿಂತ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ನ್ನು (1962ರ ಕರ್ನಾಟಕ ಅಧಿನಿಯಮ 10) ಈ ಮುಂದಿನ ಕಾರಣಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ, ಎಂದರೆ:-

(1) 1995ರಿಂದ ರೂಪಾಯಿ ಮೌಲ್ಯದ ಪರಿಷ್ಕರಣೆಯನ್ನು ಪರಿಗಣನೆಗೆ ತೆಗೆದುಕೊಂಡು ಯಾವುದೇ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಕೃಷಿ ಭೂಮಿಗಳನ್ನು ಹೊರತುಪಡಿಸಿದ ಮೂಲಗಳಿಂದ ವಾರ್ಷಿಕ ಆದಾಯ ಮಿತಿಯನ್ನು ಎರಡು ಲಕ್ಷದಿಂದ ಇಪ್ಪತ್ತೈದು ಲಕ್ಷಕ್ಕೆ ಹೆಚ್ಚಿಸುವುದು;

(2) ಅಂಥ ಅನುಮತಿಗಳನ್ನು ಮಂಜೂರು ಮಾಡುವಾಗ ಹೆಚ್ಚು ಎಚ್ಚರಿಕೆ ವಹಿಸಲು 80ನೇ ಪ್ರಕರಣದ ಅಡಿಯಲ್ಲಿ ಕೃಷಿ ಭೂಮಿಯ ಖರೀದಿಗೆ ಕೃಷಿಯೇತರನಿಗೆ ಅಂಥ ಅನುಮತಿಯನ್ನು ಮಂಜೂರು ಮಾಡಲು ಅಸಿಸ್ಟೆಂಟ್ ಕಮೀಷನರ್‌ಗೆ ಬದಲಾಗಿ ಜಿಲ್ಲಾಧಿಕಾರಿಗೆ ಅಧಿಕಾರ ನೀಡುವುದು;

(3) ಯಾವುದೇ ಪ್ರದೇಶದಲ್ಲಿನ ಭೂಮಿಗೆ ಅಧಿನಿಯಮದ 63, 79ಎ, 79ಬಿ ಪ್ರಕರಣದ ಉಪಬಂಧಗಳಿಂದ ವಿನಾಯತಿಯನ್ನು ನೀಡಲು ಸರ್ಕಾರದ ಪರವಾಗಿ ಸರ್ಕಾರ ಮತ್ತು ಜಿಲ್ಲಾಧಿಕಾರಿಯು ಚಲಾಯಿಸಬಹುದಾದ ಅಧಿಕಾರವನ್ನು ಹೆಚ್ಚಿಸುವುದು.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ವಿ. ಶ್ರೀನಿವಾಸ ಪ್ರಸಾದ್**
ಕಂದಾಯ ಸಚಿವರು

**ಎಂ. ಗುರುರಾಜ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

## ಅನುಬಂಧ

## ಕರ್ನಾಟಕ ಭೂಸುಧಾರಣೆಗಳ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 10)

## ಉದ್ಧೃತ ಭಾಗ

**XX XX XX**

**79ಎ. ಕೆಲವು ವ್ಯಕ್ತಿಗಳು ಭೂಮಿಯನ್ನು ಆರ್ಜಿಸಲು ನಿಷೇಧ.–** (1) ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ 1995ರ ಪ್ರಾರಂಭದ ದಿನಾಂಕದಂದು ಅಥವಾ ಅಂದಿನಿಂದ ಕೃಷಿ ಭೂಮಿಗಳಿಂದಲ್ಲದೆ ಇತರ ಮೂಲಗಳಿಂದ ಎರಡು ಲಕ್ಷ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ಖಚಿತ ವಾರ್ಷಿಕ ವರಮಾನವಿರುವ ವ್ಯಕ್ತಿಗೆ ಅಥವಾ ಕುಟುಂಬಕ್ಕೆ ಅಥವಾ ಅವಿಭಕ್ತ ಕುಟುಂಬಕ್ಕೆ ಭೂ ಒಡೆಯನಾಗಿ, ಭೂ ಮಾಲೀಕನಾಗಿ, ಗೇಣಿದಾರನಾಗಿ ಅಥವಾ ಅಡಮಾನದಾರನಾಗಿ ಸ್ವಾಧೀನದ ಸಹಿತ ಅಥವಾ ಅನ್ಯಥಾ ಅಥವಾ ಭಾಗಶಃ ಒಂದು ಸಾಮರ್ಥ್ಯದಲ್ಲಿ ಮತ್ತು ಭಾಗಶಃ ಇನ್ನೊಂದು ಸಾಮರ್ಥ್ಯದಲ್ಲಿ ಯಾವುದೇ ಭೂಮಿಯನ್ನು ಆರ್ಜಿಸಲು ಹಕ್ಕಿರತಕ್ಕದ್ದಲ್ಲ.

(2) ಉಪ ಪ್ರಕರಣ (1) ರ ಉದ್ದೇಶಗಳಿಗಾಗಿ,–

(i) ಕೃಷಿ ಭೂಮಿಯಿಂದಲ್ಲದೆ ಇತರ ಮೂಲಗಳಿಂದ ಕುಟುಂಬದ ಅಥವಾ ಅವಿಭಕ್ತ ಕುಟುಂಬದ ಎಲ್ಲರ ಒಟ್ಟು ಆದಾಯವನ್ನು ಸಂದರ್ಭಾನುಸಾರ ಆ ಕುಟುಂಬಕ್ಕೆ ಅಥವಾ ಆ ಅವಿಭಕ್ತ ಕುಟುಂಬಕ್ಕೆ ಅಂಥ ಮೂಲಗಳಿಂದ ಬಂದ ಆದಾಯವೆಂದು ಭಾವಿಸತಕ್ಕದ್ದು;

(ii) ಕೃಷಿ ಭೂಮಿಯಿಂದಲ್ಲದೆ ಇತರ ಮೂಲಗಳಿಂದ ಯಾರೇ ವ್ಯಕ್ತಿಗೆ ಅಥವಾ ಕುಟುಂಬಕ್ಕೆ ಅಥವಾ ಅವಿಭಕ್ತ ಕುಟುಂಬಕ್ಕೆ ಎರಡು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿಲ್ಲದಷ್ಟು ಸರಾಸರಿ ವಾರ್ಷಿಕ ವರಮಾನವು ಯಾವುದೇ ಒಂದು ದಿನಕ್ಕೆ ಹಿಂದಿನ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬಂದ ಐದು ವರ್ಷಗಳ ಅವಧಿಯಲ್ಲಿ ಇದ್ದರೆ, ಅಂಥ ದಿನದಂದು, ಅಂಥ ವ್ಯಕ್ತಿಗೆ ಅಥವಾ ಕುಟುಂಬಕ್ಕೆ ಅಥವಾ ಅವಿಭಕ್ತ ಕುಟುಂಬಕ್ಕೆ ಅಂಥ ಮೂಲಗಳಿಂದ ಎರಡು ಲಕ್ಷ ರೂಪಾಯಿಗಳಿಗೆ ಕಡಿಮೆಯಿಲ್ಲದ ಖಚಿತ ವಾರ್ಷಿಕ ವರಮಾನವು ಇತ್ತೆಂದು ಭಾವಿಸತಕ್ಕದ್ದು.

**ವಿವರಣೆ.–** ಎರಡು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಒಟ್ಟು ವಾರ್ಷಿಕ ವರಮಾನದ ಮೇಲೆ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಐದು ವರ್ಷಗಳಿಗೆ ವರಮಾನ ತೆರಿಗೆ ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ 43)ರ ಮೇರೆಗೆ ಯಾವ ವ್ಯಕ್ತಿಯ ಅಥವಾ ಕುಟುಂಬದ ಅಥವಾ ಅವಿಭಕ್ತ ಕುಟುಂಬದ ವರಮಾನ ತೆರಿಗೆಯನ್ನು ನಿರ್ಧರಣೆ ಮಾಡಲಾಗಿದೆಯೋ, ಆ ವ್ಯಕ್ತಿಗೆ ಅಥವಾ ಕುಟುಂಬಕ್ಕೆ ಅಥವಾ ಅವಿಭಕ್ತ ಕುಟುಂಬಕ್ಕೆ ಕೃಷಿ ಭೂಮಿಗಳಿಂದಲ್ಲದೆ ಇತರ ಮೂಲಗಳಿಂದ ಎರಡು ಲಕ್ಷ ರೂಪಾಯಿಗಳಿಗೆ ಕಡಿಮೆಯಿಲ್ಲದ ಸರಾಸರಿ ವಾರ್ಷಿಕ ವರಮಾನವಿರುವುದೆಂದು ಭಾವಿಸತಕ್ಕದ್ದು.

**XX XX XX**

80. ಬೇಸಾಯಗಾರರಲ್ಲದವರಿಗೆ ವರ್ಗಾವಣೆಯ ನಿಷೇಧ.– (1) **XX XX XX**

ಪರಂತು, ಆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯುಳ್ಳ ಅಸಿಸ್ಟೆಂಟ್ ಕಮೀಷನರು ಅಥವಾ ಈ ಬಗ್ಗೆ ರಾಜ್ಯ ಸರ್ಕಾರದಿಂದ ಯಾವುದೇ ಪ್ರದೇಶದ ಸಂಬಂಧದಲ್ಲಿ ಪ್ರಾಧಿಕೃತನಾದ ಅಸಿಸ್ಟೆಂಟ್ ಕಮೀಷನರ್‌ಗಿಂತ ಕಡಿಮೆ ದರ್ಜೆಯವನಲ್ಲದ ಯಾವನೇ ಅಧಿಕಾರಿಯು 79ಎ ಅಥವಾ 79ಬಿ

ಪ್ರಕರಣದ ಮೇರೆಗೆ ಭೂಮಿಯನ್ನು ಆರ್ಜಿಸಲು ಅಥವಾ ಹೊಂದಲು ಹಕ್ಕಿಲ್ಲದ ವ್ಯಕ್ತಿಯನ್ನು ಹೊರತುಪಡಿಸಿ ಬೇಸಾಯವನ್ನು ಕೈಗೊಳ್ಳಬೇಕೆಂದು ಸದ್ಭಾವನೆಯಿಂದ ಉದ್ದೇಶಿಸುವ ಇತರ ವ್ಯಕ್ತಿಗೆ ಭೂಮಿಯನ್ನು ಆರ್ಜಿಸಲು ಅಥವಾ ಹೊಂದಲು ಸಾಧ್ಯವಾಗುವಂತೆ ಮಾಡುವುದಕ್ಕಾಗಿ ಅಂಥ ಮಾರಾಟ, ದಾನ ಅಥವಾ ವಿನಿಮಯ ಮಾಡಲು ನಿಯಮಿಸ ಬಹುದಾದಂಥ ಷರತ್ತುಗಳ ಜೊತೆಗೆ ಈ ಕೆಳಗಿನ ಷರತ್ತುಗಳ ಮೇರೆಗೆ ಅನುಮತಿಯನ್ನು ಕೊಡಬಹುದು, ಎಂದರೆ:-

(i) ವರ್ಗಾವಣೆ ಪಡೆದವನು ಆ ಭೂಮಿಯನ್ನು ಆರ್ಜಿಸಿದ ದಿನಾಂಕದಿಂದ ಒಂದು ವರ್ಷದೊಳಗಾಗಿ ಬೇಸಾಯವನ್ನು ಕೈಕೊಳ್ಳಬೇಕು, ಮತ್ತು

(ii) ವರ್ಗಾವಣೆ ಪಡೆದವನು ಬೇಸಾಯವನ್ನು ಐದು ವರ್ಷದೊಳಗಾಗಿ ಬಿಟ್ಟರೆ ಆ ಭೂಮಿಯ ನಿವ್ವಳ ವಾರ್ಷಿಕ ವರಮಾನದ ಎಂಟರಷ್ಟು ಮೊಬಲಗಿಗೆ ಸರಿಸಮನಾದ ಮೊಬಲಗನ್ನು ಅಥವಾ ಭೂಮಿಯನ್ನು ಕೊಂಡುಕೊಂಡಿರುವ ಸಂದರ್ಭದಲ್ಲಿ, ಭೂಮಿಗಾಗಿ ಸಂದಾಯ ಮಾಡಿದ ಬೆಲೆಯು ಆ ಭೂಮಿಯ ನಿವ್ವಳ ವಾರ್ಷಿಕ ವರಮಾನದ ಎಂಟರಷ್ಟಕ್ಕಿಂತ ಕಡಿಮೆ ಇದ್ದಲ್ಲಿ ಅದನ್ನು ಆತನಿಗೆ ಸಂದಾಯ ಮಾಡಬೇಕೆಂಬುದಕ್ಕೆ ಒಳಪಟ್ಟು ಆ ಭೂಮಿಯು ಸರ್ಕಾರದಲ್ಲಿ ನಿಹಿತವಾಗತಕ್ಕದ್ದು.

**XX XX XX**

**109. ಕೆಲವು ಭೂಮಿಗಳಿಗೆ ಕೆಲವು ಉಪಬಂಧಗಳಿಂದ ವಿನಾಯಿತಿ ನೀಡುವುದು.**-(1) ನಿಯಮಿಸಬಹುದಾದಂಥ ನಿಯಮಗಳಿಗೆ ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ (1963ರ ಕರ್ನಾಟಕ ಅಧಿನಿಯಮ 11) ಉಪಬಂಧಗಳಿಗೆ ಒಳಪಟ್ಟು, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಯಾವುದೇ ಪ್ರದೇಶದಲ್ಲಿರುವ ಯವುದೇ ಭೂಮಿಗೆ,-

(i) ಕೈಗಾರಿಕಾ ಅಭಿವೃದ್ಧಿಗಾಗಿ ಬಳಸಲಾಗುವ ಇಪ್ಪತ್ತು ಯುನಿಟ್‌ಗಳಿಗಿಂತ ಹೆಚ್ಚಿಲ್ಲದ ವಿಸ್ತೀರ್ಣದ;

(ii) ರಾಜ್ಯ ಸರ್ಕಾರದಿಂದ ಅಥವಾ ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆದ ಶೈಕ್ಷಣಿಕ ಸಂಸ್ಥೆಗಳಿಗಾಗಿ ಕೃಷಿಯೇತರ ಉದ್ದೇಶಕ್ಕಾಗಿ ಬಳಸಲಾಗುವ ನಾಲ್ಕು ಯುನಿಟಗಳಿಗಿಂತ ಹೆಚ್ಚಿಲ್ಲದ ವಿಸ್ತೀರ್ಣದ;

(iii) ಮಾನ್ಯತೆ ಪಡೆದ ಅಥವಾ ನೋಂದಾಯಿತ ಸಂಸ್ಥೆಯು ಸ್ಥಾಪಿಸಿರುವ ಅಥವಾ ನಿರ್ಮಿಸಿರುವ, ಅಧಿಸೂಚನೆಯ ಮೂಲಕ ಸರ್ಕಾರವು ನಿರ್ದಿಷ್ಟಪಡಿಸುವ ಪೂಜಾ ಸ್ಥಳಗಳಿಗಾಗಿ ಕೃಷಿಯೇತರ ಉದ್ದೇಶಕ್ಕಾಗಿ, ಬಳಸಲಾಗುವ ಒಂದು ಯುನಿಟ್‌ಗಳಿಗಿಂತ ಹೆಚ್ಚಿಲ್ಲದ ವಿಸ್ತೀರ್ಣದ;

(iv) ರಾಜ್ಯ ಸರ್ಕಾರದಿಂದ ಅನುಮೋದಿತವಾದ ವಸತಿ ಯೋಜನೆಗಾಗಿ ಬಳಸಲಾಗುವ ಹತ್ತು ಯುನಿಟಗಳಿಗಿಂತ ಹೆಚ್ಚಿಲ್ಲದ ವಿಸ್ತೀರ್ಣದ;

(v) ಪುಷ್ಪ ಕೃಷಿ ಮತ್ತು ಕೃಷಿ ಆಧಾರಿತ ಕೈಗಾರಿಗಳೂ ಸೇರಿದಂತೆ ತೋಟಗಾರಿಕೆ ಉದ್ದೇಶಕ್ಕಾಗಿ ಬಳಸಲಾಗುವ ಇಪ್ಪತ್ತು ಯುನಿಟಗಳಿಗಿಂತ ಹೆಚ್ಚಿಲ್ಲದ ವಿಸ್ತೀರ್ಣದ

– ಯಾವುದೇ ಪ್ರದೇಶದಲ್ಲಿರುವ ಯಾವುದೇ ಭೂಮಿಗೆ 63, 79ಎ, 79ಬಿ ಅಥವಾ 80ನೇ ಪ್ರಕರಣಗಳ ಉಪಬಂಧಗಳಿಂದ ವಿನಾಯಿತಿ ನೀಡಬಹುದು:

ಪರಂತು, ಜಿಲ್ಲಾಧಿಕಾರಿಯವರು ಸಹ–

(i) ಕೈಗಾರಿಕಾ ಅಭಿವೃದ್ಧಿಗಾಗಿ ಬಳಸಲಾಗುವ ಹತ್ತು ಯುನಿಟಗಳಿಗಿಂತ ಹೆಚ್ಚಿಲ್ಲದ ವಿಸ್ತೀರ್ಣದ;

(ii) ಕೃಷಿಯೇತರ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರದಿಂದ ಅಥವಾ ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆದ ಶೈಕ್ಷಣಿಕ ಸಂಸ್ಥೆಗಳಿಗಾಗಿ ಬಳಸಲಾಗುವ ಎರಡು ಯುನಿಟಗಳಿಗಿಂತ ಹೆಚ್ಚಿಲ್ಲದ ವಿಸ್ತೀರ್ಣದ;

(iii) ಕೃಷಿಯೇತರ ಉದ್ದೇಶಕ್ಕಾಗಿ, ಮಾನ್ಯತೆ ಪಡೆದ ಅಥವಾ ನೋಂದಾಯಿತ ಸಂಸ್ಥೆಯು ಸ್ಥಾಪಿಸಿರುವ ಅಥವಾ ನಿರ್ಮಿಸಿರುವ, ಅಧಿಸೂಚನೆಯ ಮೂಲಕ ಸರ್ಕಾರವು ನಿರ್ದಿಷ್ಟಪಡಿಸುವ ಪೂಜಾ ಸ್ಥಳಗಳಿಗಾಗಿ ಬಳಸಲಾಗುವ ನಾಲ್ಕನೇ ಒಂದು ಯುನಿಟಗಿಂತ ಹೆಚ್ಚಿಲ್ಲದ ವಿಸ್ತೀರ್ಣದ;

(iv) ರಾಜ್ಯ ಸರ್ಕಾರದಿಂದ ಅನುಮೋದಿತವಾದ ವಸತಿ ಯೋಜನೆಗಳಿಗಾಗಿ ಬಳಸಲಾಗುವ ಹತ್ತು ಯುನಿಟಗಳಿಗಿಂತ ಹೆಚ್ಚಿಲ್ಲದ ವಿಸ್ತೀರ್ಣದ;

(v) ಪುಷ್ಪ ಕೃಷಿ ಮತ್ತು ಕೃಷಿ ಆಧಾರಿತ ಕೈಗಾರಿಗಳೂ ಸೇರಿದಂತೆ ತೋಟಗಾರಿಕೆ ಉದ್ದೇಶಕ್ಕಾಗಿ ಬಳಸಲಾಗುವ ಹತ್ತು ಯುನಿಟಗಳಿಗಿಂತ ಹೆಚ್ಚಿಲ್ಲದ ವಿಸ್ತೀರ್ಣದ

– ಭೂಮಿಯ ಸಂಬಂಧದಲ್ಲಿ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವ ನಿಬಂಧನೆಗಳಿಗೆ ಒಳಪಟ್ಟು ಹಾಗೂ ಅಂಥ ರೀತಿಯಲ್ಲಿ ಈ ಉಪಪ್ರಕರಣದ ಮೇರೆಗೆ ರಾಜ್ಯ ಸರ್ಕಾರಕ್ಕೆ ಇರುವ ಅಧಿಕಾರಗಳನ್ನು ಚಲಾಯಿಸಬಹುದು.

**XX XX XX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಪಿ7, ಕಾಸೂ , 750–ಪ್ರತಿಗಳು 31ನೇ ಜುಲೈ, 2015

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**EIGHTH SESSION**

# THE KARNATAKA LAND REFORMS (AMENDMENT) BILL, 2015

**(L.A. Bill No. 33 of 2015)**

A Bill further to amend the Karnataka Land Reforms Act, 1961.

Whereas it is expedient further to amend the Karnataka Land Reforms Act, 1961 (Karnataka Act 10 of 1962) for the purposes hereinafter appearing.

Be it enacted by the Karnataka State Legislature in the sixty sixth year of the Republic of India, as follows:-

**1. Short title and commencement.-** (1) This Act may be called the Karnataka Land Reforms (Amendment) Act, 2015.

(2) It shall come into force at once.

**2. Amendment of section 79A.-** In the Karnataka Land Reforms Act, 1961 (Karnataka Act 10 of 1962) (hereinafter referred to as the principal Act), in section 79A,-

(i) in sub-section (1),-

(a) for the words and figures, "Land Reforms (Amendment) Act, 1995," the words and figures, "Land Reforms (Amendment) Act, 2015" shall be substituted: and

(b) for the words "two lakhs" the words, "twenty five lakhs "shall be substituted.

(ii) in sub-section (2), for the words "rupees two lakhs" wherever they occur, the words "rupees twenty five lakhs" shall be substituted.

**3. Amendment of section 80.-** In section 80 of the principal Act, in the proviso for the words "Assistant Commissioner" occurring in two places, the words "the Deputy Commissioner" shall respectively be substituted"

**4. Amendment of section 109. -** In section 109 of the principal Act,

(1) in sub-section (1),-

(a) in clause (i), for the words "twenty units" the words "forty units" shall be substituted.

(b) in clause (ii), for the words "four units", the words "eight units" shall be substituted.

(c) in clause (iii) for the words "one unit" the words "two units" shall be substituted.

(d) in clause (iv), for the words "ten units", the words "twenty units" shall be substituted.

(e) in clause (v), for the words "twenty units" the words "forty units" shall be substituted.

(f) in the proviso,-

(i) in clause (i), for the words "ten units" the words "twenty units" shall be substituted.

(ii) in clause (ii), for the words "two units" the words "four units" shall be substituted.

(iii) in clause (iii), for the words "one fourth of.a unit", the words and figures "half of a unit (2.22 acre)" shall be substituted.

(iv) in clause (iv) for the words "ten units" the words "twenty units" shall be substituted.

(v) in clause (v), for the words "ten units" the words "twenty units" shall be substituted.

**STATEMENT OF OBJECTS AND REASONS**

It is considered necessary to amend the Karnataka Land Reforms Act, 1961 (Karnataka Act 10 of 1962), for the following reasons, namely:-

(1) to enhance the annual income limit from two lakh to twenty-five lakhs from sources other than agricultural lands to acquire any land taking into consideration the revision of rupee value since 1995;

(2) to empower Deputy Commissioner instead of Assistant Commissioner to grant permission for non agriculturist to purchase agriculture land under section 80 to take more caution while granting such permissions;

(3) to enhance the power of the Government and the Deputy Commissioner excisable on behalf of the Government to grant the land in any area to exempt from the provisions of section 63, 79A, 79B of the Act.

Hence, the Bill.

## FINANCIAL MEMORANDUM

There is no extra expenditure involved in the proposed Legislative measure.

**V. SRINIVASA PRASAD**
Minister for Revenue

**M. GURURAJA**
Secretary
Karnataka Legislative Assembly

**ANNEXURE**

**EXTRACT FROM THE KARNATAKA LAND REFORMS ACT, 1961 (KARNATAKA ACT 10 OF 1962)**

**XXX XXX XXX**

**79A. Acquisition of land by certain persons prohibited.**—(1) On and from the commencement of the the Karnataka Land Reforms (Amendment) Act, 1995, no person who or a family or a joint family whichhas an assured annual income of not less than rupees two lakhs fromsources other than agricultural lands shall be entitled to acquire any land whether as land owner, landlord, tenant or mortgagee with possession or otherwise or partly in one capacity and partly in another.

(2) For purposes of sub-section (1)—

(i) the aggregate income of all the members of a family or a joint family from sources other than agricultural land shall be deemed to be income of the family or joint family, as the case may be, from such sources;

(ii) a person or a family or a joint family shall be deemed to have an assured annual income of not less than rupees two lakhs from sources other than agricultural land on any day if such person or family or joint family had an average annual income of not less than rupees two lakhs from such sources during a period of five consecutive years preceding such day.

**Explanation.**—A person who or a family or a joint family which has been assessed to income tax under the Income Tax Act, 1961 (Central Act 43 of 1961) on an yearly total income of not less than rupees two lakhs for five consecutive years shall be deemed to have an average annual income of not less than rupees two lakhs from sources other than agricultural lands.

**XXX XXX XXX**

**80. Transfers to non-agriculturists barred.— XXX XXX XXX**

Provided that the Assistant Commissioner having jurisdiction over the area or any officer not below the rank of an Assistant Commissioner authorised by the State Government in this behalf in respect of any area may grant permission for such sale, gift, or exchange, 3 [to enable a person other than a person disentitled to acquire or hold land under section 79A or

section 79B]3 who bona fide intend taking up agriculture to acquire land on such conditions as may be prescribed in addition to the following conditions, namely:—

(i) that the transferee takes up agriculture within one year from the date of acquisition of land, and

(ii) that if the transferee gives up agriculture within five years, the land shall vest in the State Government subject to payment to him of an amount equal to eight times the net annual income of the land or where the land has been purchased, the price paid for the land, if such price is less than eight times the net annual income of the land.

**xxx xxx xxx**

**109. Certain lands to be exempt from certain provisions.**—(1) Subject to such rules as may be prescribed and the provisions of the Karnataka Town and Country Planning Act, 1961 (Karnataka Act 11 of 1963), the State Government may, by notification, exempt, any land in any area from the provisions of sections 63, 79A, 79B or 80 to be used for,—

(i) industrial development, the extent of which shall not exceed twenty units;

(ii) educational institutions recognised by the State or Central Government to be used for non-agricultural purpose the extent of which shall not exceed four units;

(iii) places of worship to be specified by Government by notification which are established or constructed by a recognised or registered body for non-agricultural purpose, the extent of which shall not exceed one unit;

(iv) a housing project, approved by the State Government the extent of which shall not exceed ten units;

(v) the purpose of horticulture including floriculture and agro based industries the extent of which shall not exceed twenty units:

Provided that the Deputy Commissioner may also exercise the powers of the State Government under this sub-section, subject to the restrictions and in the manner specified therein, in respect of the land to be used for,-

(i) industrial development, the extent of which shall not exceed ten units;

(ii) educational institutions recognised by the State or Central Government to be used for non-agricultural purpose the extent of which shall not exceed two units;

(iii) places of worship to be specified by Government by notification which are established or constructed by a recognised or a registered body for non-agricultural purpose, the extent of which shall not exceed one fourth of a unit;

(iv) a housing project, approved by the State Government the extent of which shall not exceed ten units;

(v) the purpose of horticulture including floriculture and agro based industries the extent of which shall not exceed ten units.

**XXX** **XXX** **XXX**

Government Press, Vikasa Soudha, Bengaluru, P7, W.D. , Copies 750, 31st, 2015